**ದಿನಾಂಕಃ 07.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಸಿ.ಎಸ್ ವಕೀಲರಿಂದಃ**

ನಾನು ಕೆನರಾ ಬ್ಯಾಂಕ್ ತಿ.ನರಸೀಪುರ ಶಾಖೆಯಲ್ಲಿ ನನ್ನ ಚಿನ್ನದ ಒಡವೆಗಳನ್ನು ಅಡ ಇಟ್ಟು ಹಣ ಪಡೆದುಕೊಂಡಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ತನ್ನ ಬಳಿ ಆದಾಯ ಇದ್ದರೇ ಮಾತ್ರ ಬೇರೆಯವರಿಗೆ ಸಾಲ ನೀಡುತ್ತಾರೆ ಎಂದರೆ ಸರಿ. ನಾನು ಮತ್ತು ಆರೋಪಿಯ ಹೆಂಡತಿ ಮೀನಾರವರು ತುಂಬಾ ಪರಿಚಿತರು ಎಂದರೆ ಸರಿ. ನಾನು ಮತ್ತು ಆರೋಪಿಯ ಹೆಂಡತಿ ಮೀನಾರವರು ಒಟ್ಟಾಗಿ ಚೀಟಿ ನಡೆಸುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಚೀಟಿ ನಡೆಸುತ್ತಿದ್ದಾಗ ಭದ್ರತೆಗಾಗಿ ಆರೋಪಿಯಿಂದ ಖಾಲಿ ಚೆಕ್ಕುಗಳನ್ನು ಭದ್ರತೆಗಾಗಿ ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿಯ ಹೆಂಡತಿ ಮೀನಾರವರು ಒಟ್ಟಾಗಿ ನಡೆಸುತ್ತಿದ್ದ ಚೀಟಿ ವ್ಯವಹಾರವು ಮುಗಿದಿದ್ದರೂ ಸಹ ನಾನು ಆರೋಪಿಯಿಂದ ಭದ್ರತಗಾಗಿ ಪಡೆದುಕೊಂಡಿದ್ದ ಖಾಲಿ ಚೆಕ್ಕುಗಳನ್ನು ವಾಪಸ್ಸು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಗ್ರಾಮದ ಮುಖಂಡರ ಸಮಕ್ಷಮ ಪಂಚಾಯತಿ ಮಾಡಿ ಸದರಿ ಚೆಕ್ಕುಗಳನ್ನು ಆರೋಪಿಗೆ ವಾಪಸ್ಸು ನೀಡುವಂತೆ ನನಗೆ ಬುದ್ಧಿವಾದ ಹೇಳಿದ್ದರು ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಆರೋಪಿಯು ನನಗೆ ಯಾವುದೇ ಹಣವನ್ನು ಮರುಪಾವತಿಸುವ ಬಾಧ್ಯತೆ ಹೊಂದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಚೀಟಿ ವ್ಯವಹಾರಕ್ಕೆ ಭದ್ರತೆಗಾಗಿ ನೀಡಿದ್ದ ಖಾಲಿ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ ಯಾವುದೇ ತಿಳುವಳಿಕೆ ಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಫಿರ್ಯಾಧಿಯಲ್ಲಿ ನಮೂದಿಸಿರುವ ವಿಳಾಸದಲ್ಲಿಯೇ ವಾಸಿಸುತ್ತಿದ್ದಾರೆ ಎಂದರೆ ಸರಿ. ಅಂಚೆ ಇಲಾಖೆಯ ಪೋಸ್ಟ್ ಮಾಸ್ಟರ್ ನನಗೆ ಪರಿಚಿತರು ಎಂದರೆ ಸರಿಯಲ್ಲ. ನಾನು ಮತ್ತು ಸದರಿ ಅಂಚೆ ಇಲಾಖೆಯ ಸಿಬ್ಬಂಧಿ ಶಾಮೀಲಾಗಿ ಅಂಚೆ ಕವರ್ ಮೇಲೆ Not claimed ಎಂಬ ಹಿಂಬರಹ ನಮೂದಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲದಿರುವುದರಿಂದ ಆರೋಪಿಯು ನನಗೆ ಯಾವುದೇ ಹಣವನ್ನು ಮರುಪಾವತಿಸುವ ಬಾದ್ಯತೆ ಹೊಂದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.